**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾಗಳ ನ್ಯಾಯಾಲಯ,**

**ಯಾದಗಿರಿ**

**ಸಿ.ಸಿ. ನಂ..1306/2024**

**ಫಿರ್ಯಾದುದಾರರು:** ಶ್ರೀ ವೀರಭದ್ರಪ್ಪ ತಂದೆ ಗುರುಲಿಂಗಪ್ಪ ಮೊಟೊರ್,

**ವಿರುದ್ಧ**

**ಆಪಾದಿತ:** ಶ್ರೀ ಸಿದ್ದಲಿಂಗರೆಡ್ಡಿ ತಂದೆ ತಿಪ್ಪರೆಡ್ಡಿ ಪೋಲಿಸ್ ಪಾಟೀಲ್,

**ಆಪಾದನೆ**

**ಶ್ರೀ ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honor) ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.**

ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **11.07.2019** ರಂದು ರೂ.**2,00,000/-** ಗಳನ್ನು ಸಾಲಪಡೆದಿದ್ದು, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತನಾದ ನೀವು ಖಾತೆ ಹೊಂದಿರುವ ಎಕ್ಸಿಸ್ ಬ್ಯಾಂಕ್, ಯಾದಗಿರಿ ಶಾಖೆಗೆ ಸೇರಿದ **008018** ಸಂಖ್ಯೆಯ ಚೆಕ್ ನಲ್ಲಿ ರೂ. **2,00,000/-** ಹಾಗೂ ದಿನಾಂಕ **13.02.2024** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ. ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ, "20-Payment stopped by drawer" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **14.02.2024** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಆಪಾದಿತನಾದ ನಿಮ್ಮ ಕೋರಿಕೆಯ ಮೇರೆಗೆ ಪುನಃ ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ, "20-Payment stopped by drawer" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **03.05.2024** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ಅಪಾದಿತನಾದ ನಿಮ್ಮ

ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ **17.05.2024** ರಂದು ನೀವು ಹಳ್ಳಿಯನ್ನು ತೋರಿದಿರುತ್ತೀರಿ ಎಂದು ಹಿಂತಿರುಗಿ ಬಂದಿರುತ್ತದೆ. ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್ ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138** ರ ರಿತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ- 1 : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

(ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.)

ದಿನಾಂಕಃ 27.02.2025.
ಸ್ಥಳಃ ಯಾದಗಿರ

ದಿವಾಣಿ ನ್ಯಾಯಾಧಿಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
**ಯಾದಗಿರಿ.**